

# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 223 | Pages. 2 | Date: 15-08-2026, SATURDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 223 - ಪುಟಗಳು : 2 | 15-08-2026 | ಶನಿವಾರ | Ph: 8762954248 | ದರ : ₹1






ನಮ್ಮೆಲ್ಲ ಓದುಗರು, ಚಂದಾದಾರರು,
ಜಾಹೀರಾತುದಾರರಿಗೆ ಸ್ವಾತಂತ್ರ್ಯೋತ್ಸವದ
ಹಾರ್ದಿಕ ಶುಭಾಶಯಗಳು

- ಕನ್ನಡ ಪೋಸ್ಟ್ ಬಳಗ

KANNADAPOSTNEWS | KANNADAPOSTDIGITAL | ಕನ್ನಡ POST | 8762954248





# ರಾಜ್ಯದ 31 ಜಿಲ್ಲೆಗಳಿಗೆ ಉಸ್ತುವಾರಿ ಸಚಿವರ ನೇಮಕ

## 8 ವರ್ಷಗಳ ಬಳಿಕ ಹಾಸನಕ್ಕೆ ಒಲಿದ 'ಸ್ಥಳೀಯ' ಭಾಗ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯ ಸರ್ಕಾರ ಶುಕ್ರವಾರ ರಾಜ್ಯದ ಎಲ್ಲಾ 31 ಜಿಲ್ಲೆಗಳಿಗೂ ನೂತನ ಜಿಲ್ಲಾ ಉಸ್ತುವಾರಿ ಸಚಿವರನ್ನು ನೇಮಕ ಮಾಡಿ ಅಧಿಕೃತ ಆದೇಶ ಹೊರಡಿಸಿದೆ. ತೀವ್ರ ಕುತೂಹಲ ಕೆರಳಿಸಿದ್ದ ಹಾಸನ ಜಿಲ್ಲೆಯ ಉಸ್ತುವಾರಿ ಜವಾಬ್ದಾರಿಯನ್ನು ನೂತನ ಸಚಿವ ಹಾಗೂ ಅರಸೀಕೆರೆ ಕ್ಷೇತ್ರದ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರಿಗೆ ವಹಿಸಲಾಗಿದೆ. ಈ ನೇಮಕದೊಂದಿಗೆ ಬರೋಬ್ಬರಿ ಎಂಟು ವರ್ಷಗಳ ಸುದೀರ್ಘ ಅವಧಿಯ ಬಳಿಕ ಹಾಸನ ಜಿಲ್ಲೆಯ ಸ್ಥಳೀಯ ಶಾಸಕರೊಬ್ಬರಿಗೆ ಮಂತ್ರಿಗಿರಿ ಹಾಗೂ ತಮ್ಮದೇ ಜಿಲ್ಲೆಯ ಉಸ್ತುವಾರಿ ಸ್ಥಾನ ಒಲಿದಂತಾಗಿದೆ.

ಮುಖ್ಯಮಂತ್ರಿಗಳ ಸೂಚನೆಯ ಮೇರೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಅಧಿಕೃತ ಪಟ್ಟಿಯನ್ನು ಬಿಡುಗಡೆ ಮಾಡಿದ್ದಾರೆ. ಈ ಪಟ್ಟಿಯಲ್ಲಿ ಹಿರಿಯ ಸಚಿವರು ಹಾಗೂ ಹೊಸದಾಗಿ ಸಂಪುಟಕ್ಕೆ ಸೇರ್ಪಡೆಯಾದ ಹಲವು ಸಚಿವರಿಗೆ ವಿವಿಧ ಜಿಲ್ಲೆಗಳ ಜವಾಬ್ದಾರಿಯನ್ನು ಹಂಚಿಕೆ ಮಾಡಲಾಗಿದೆ.

### 8 ವರ್ಷಗಳ ಬಳಿಕ ಸ್ಥಳೀಯರಿಗೆ ಒಲಿದ ಅವಕಾಶ

ಕಳೆದ ಎಂಟು ವರ್ಷಗಳಿಂದ ಹಾಸನ ಜಿಲ್ಲೆಗೆ ಹೊರ ಜಿಲ್ಲೆಯ ನಾಯಕರೇ ಉಸ್ತುವಾರಿ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದರು. 2018-19ರ ಅವಧಿಯ ಬಳಿಕ ಸ್ಥಳೀಯ ಶಾಸಕರಿಗೆ ಸಚಿವ ಸ್ಥಾನದ ಅವಕಾಶ ಸಿಕ್ಕಿರಲಿಲ್ಲ. ಇದರಿಂದಾಗಿ ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗಳ ತ್ವರಿತ ಅನುಷ್ಠಾನ, ಸ್ಥಳೀಯ ಸಮಸ್ಯೆಗಳಿಗೆ ಸ್ಪಂದನೆ ಹಾಗೂ ಆಡಳಿತಾತ್ಮಕ ನಿರ್ಧಾರಗಳಲ್ಲಿ ಸ್ಥಳೀಯ ನಾಯಕತ್ವದ ಕೊರತೆ ಎದ್ದು ಕಾಣುತ್ತಿತ್ತು. ಇದೀಗ ಸತತವಾಗಿ 4 ಬಾರಿ ಶಾಸಕರಾಗಿ ಆಯ್ಕೆಯಾಗಿರುವ, ಜಿಲ್ಲೆಯ ರಾಜಕಾರಣ ಹಾಗೂ ಭೌಗೋಳಿಕ ಸ್ಥಿತಿಗತಿಗಳ ನಾಡಿಮಿಡಿತವನ್ನು ಅರಿತಿರುವ ಕೆ.ಎಂ. ಶಿವಲಿಂಗೇಗೌಡ ಅವರಿಗೆ ಈ ಜವಾಬ್ದಾರಿ ನೀಡಿರುವುದು ಜಿಲ್ಲೆಯ ಜನತೆ ಹಾಗೂ ಮುಖಂಡರಲ್ಲಿ ಹೊಸ ಉತ್ಸಾಹ ಮೂಡಿಸಿದೆ.



ಹಾಸನಕ್ಕೆ ಕೆಎಂಶಿ

### ನೂತನ ಜಿಲ್ಲಾ ಉಸ್ತುವಾರಿ ಸಚಿವರ ಸಂಪೂರ್ಣ ಪಟ್ಟಿ

ಡಾ. ಜಿ. ಪರಮೇಶ್ವರ್ | ತುಮಕೂರು |
ಶ್ರೀ ಕೆ.ಜೆ. ಜಾರ್ಜ್ | ಚಿಕ್ಕಮಗಳೂರು |
ಶ್ರೀ ಕೆ.ಎನ್. ರಾಜಣ್ಣ | ಬೆಂಗಳೂರು ಗ್ರಾಮಾಂತರ |
ಶ್ರೀ ರಾಮಲಿಂಗಾರೆಡ್ಡಿ | ಕೋಲಾರ |
ಶ್ರೀ ಎಂ.ಬಿ. ಪಾಟೀಲ್ | ವಿಜಯಪುರ |
ಶ್ರೀ ಕೃಷ್ಣ ಬೈರೇಗೌಡ | ಬೆಂಗಳೂರು ನಗರ |
ಶ್ರೀ ಸತೀಶ್ ಜಾರಕಿಹೊಳಿ | ಬೆಳಗಾವಿ |
ಶ್ರೀ ಯು.ಟಿ. ಖಾದರ್ | ದಕ್ಷಿಣ ಕನ್ನಡ |
ಶ್ರೀ ಪ್ರಿಯಾಂಕ್ ಖರ್ಗೆ | ಕಲಬುರಗಿ |
ಶ್ರೀ ಈಶ್ವರ ಖಂಡ್ರೆ | ಬೀದರ್ |
ಡಾ. ಶರಣಬಸಪ್ಪ ದರ್ಶನಾಪುರ | ಯಾದಗಿರಿ |
ಶ್ರೀ ಬಸವರಾಜ ರಾಯರೆಡ್ಡಿ | ಗದಗ |
ಶ್ರೀ ಎನ್. ಚಲುವರಾಯಸ್ವಾಮಿ | ಮಂಡ್ಯ |
ಶ್ರೀ ಸುರೇಶ್ ಬಿ.ಎಸ್. | ಚಿಕ್ಕಬಳ್ಳಾಪುರ |
ಡಾ. ಯತೀಂದ್ರ ಸಿದ್ದರಾಮಯ್ಯ | ಮೈಸೂರು |
ಶ್ರೀ ಸಂತೋಷ್ ಎಸ್. ಲಾಡ್ | ಧಾರವಾಡ |
ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ | ಕೊಪ್ಪಳ |
ಶ್ರೀ ಎನ್.ಎಸ್. ಬೋಸರಾಜು | ದಾವಣಗೆರೆ |
ಶ್ರೀ ಸಿ. ಪುಟ್ಟರಂಗಶೆಟ್ಟಿ | ಚಾಮರಾಜನಗರ |
ಶ್ರೀ ಮಧು ಬಂಗಾರಪ್ಪ | ಶಿವಮೊಗ್ಗ |
ಶ್ರೀ ರಾಮಪ್ಪ | ಹಾವೇರಿ |
ಶ್ರೀ ಬಿ. ನಾಗೇಂದ್ರ | ಬಳ್ಳಾರಿ |
ಶ್ರೀ ಲಕ್ಷ್ಮಣ ಸವದಿ | ಉತ್ತರ ಕನ್ನಡ |
ಶ್ರೀ ಪಿ.ಎಂ. ನರೇಂದ್ರಸ್ವಾಮಿ | ಕೊಡಗು |
ಶ್ರೀ ಕೆ.ಎಂ. ಶಿವಲಿಂಗೇಗೌಡ | ಹಾಸನ |
ಶ್ರೀ ವಿಜಯಾನಂದ ಕಾಶಪ್ಪನವರ್ | ಬಾಗಲಕೋಟೆ |
ಶ್ರೀ ಹೆಚ್.ಕೆ. ಬಾಲಕೃಷ್ಣ | ಬೆಂಗಳೂರು ದಕ್ಷಿಣ |
ಶ್ರೀ ಅಜಯ್ ಸಿಂಗ್ | ರಾಯಚೂರು |
ಶ್ರೀ ರಿಜ್ವಾನ್ ಅರ್ಷದ್ | ಉಡುಪಿ |
ಶ್ರೀ ಟಿ. ರಘುಮೂರ್ತಿ | ಚಿತ್ರದುರ್ಗ |
ಶ್ರೀ ಕೆ.ಎನ್. ಬಸವರಾಜು | ವಿಜಯನಗರ |

### ಕಳೆದ 8 ವರ್ಷಗಳಲ್ಲಿ ಹಾಸನ ಉಸ್ತುವಾರಿಗಳು

(2018ರ ನಂತರ ಹೊರ ಜಿಲ್ಲೆಯವರಿಗೇ ಒಲಿದಿದ್ದ ಪಟ್ಟ)

- **ಕೃಷ್ಣಬೈರೇಗೌಡ** (ಬೆಂಗಳೂರು ಮೂಲದವರು)
  ಆಗಸ್ಟ್ 2025 - ಆಗಸ್ಟ್ 2026
- **ಕೆ. ಎನ್. ರಾಜಣ್ಣ** (ತುಮಕೂರು ಮೂಲದವರು)
  2023 - 2025
- **ಕೆ. ಗೋಪಾಲಯ್ಯ** (ಬೆಂಗಳೂರು ಮೂಲದವರು)
  ಜೂನ್ 2020 - 2023
- **ಜೆ. ಸಿ. ಮಾಧುಸ್ವಾಮಿ** (ತುಮಕೂರು ಮೂಲದವರು)
  2019 - ಜೂನ್ 2020
- **ಎಚ್. ಡಿ. ರೇವಣ್ಣ** (ಹಾಸನ ಮೂಲದವರು)
  2018 - 2019 (ಮೈತ್ರಿ ಸರ್ಕಾರ)

### ಬೆಟ್ಟದಷ್ಟು ನಿರೀಕ್ಷೆಗಳು

ಮಲೆನಾಡು ಭಾಗದಲ್ಲಿ ಮಿತಿಮೀರಿರುವ ಕಾಡಾನೆ ಮತ್ತು ಮಾನವ ಸಂಘರ್ಷ, ಹೇಮಾವತಿ ಹಿನ್ನೀರು ಸಂತ್ರಸ್ತರ ಸಮಸ್ಯೆಗಳು, ನನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿಯಂತಹ ಹಲವು ಜ್ವಲಂತ ಸಮಸ್ಯೆಗಳಿಗೆ ತ್ವರಿತ ಪರಿಹಾರ ಕಂಡುಕೊಳ್ಳುವ ದೊಡ್ಡ ಸವಾಲು ನೂತನ ಸಚಿವರ ಮುಂದಿದೆ.

# ನಗರದಲ್ಲಿ ಹರ್ ಘರ್ ತಿರಂಗಾ ಅಭಿಯಾನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಹರ್ ಘರ್ ತಿರಂಗಾ ಅಭಿಯಾನ ಹಿನ್ನೆಲೆಯಲ್ಲಿ ಮಾಜಿ ಶಾಸಕ ಹಾಗೂ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಜೆ. ಗೌಡ ಅವರು ಶುಕ್ರವಾರ ನಗರದಲ್ಲಿ ವಾಹನ ಚಾಲಕರು ಹಾಗೂ ಸಾರ್ವಜನಿಕರಿಗೆ ರಾಷ್ಟ್ರಧ್ವಜ ವಿತರಿಸಿ, ಕೆಲವು ವಾಹನಗಳಿಗೆ ಸ್ವತಃ ತಿರಂಗಾ ಕಟ್ಟುವ ಮೂಲಕ ಗಮನ ಸೆಳೆದರು.

ನಗರದ ಎಂ.ಜಿ. ರಸ್ತೆಯ ಗಾಂಧೀಜಿ ಪ್ರತಿಮೆ ಬಳಿ ನಡೆದ ಕಾರ್ಯಕ್ರಮದಲ್ಲಿ ಪ್ರೀತಂಗೌಡ ಅವರು ಸಾರ್ವಜನಿಕರಿಗೆ ತಿರಂಗಾ ಹಸ್ತಾಂತರಿಸಿದರು. ಬಳಿಕ ಹಲವು ವಾಹನಗಳಿಗೆ ಸ್ವತಃ ರಾಷ್ಟ್ರಧ್ವಜ ಕಟ್ಟುವ ಮೂಲಕ ಅಭಿಯಾನಕ್ಕೆ ಉತ್ತೇಜನ ನೀಡಿದರು.

ಈ ವೇಳೆ ಮಾತನಾಡಿದ ಅವರು, ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಶಯದಂತೆ ಹರ್ ಘರ್ ತಿರಂಗಾ ಅಭಿಯಾನವನ್ನು ನಗರದಲ್ಲಿ ಪರಿಣಾಮಕಾರಿಯಾಗಿ ನಡೆಸಲು ಸಂಕಲ್ಪ ಮಾಡಲಾಗಿದೆ ಎಂದರು. ನಗರ ಬಿಜೆಪಿ ಘಟಕ ಅಧ್ಯಕ್ಷ ಮಂಜು ಅವರ ನೇತೃತ್ವದಲ್ಲಿ ಪಕ್ಷದ ಹಿರಿಯರು ಹಾಗೂ ಕಾರ್ಯಕರ್ತರು ಮನೆಮನೆಗೆ ತೆರಳಿ ರಾಷ್ಟ್ರಧ್ವಜ ಹಾರಿಸುವಂತೆ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ. ಇದರ ಭಾಗವಾಗಿ ವಾಹನ ಚಾಲಕರು ಹಾಗೂ ಸಾರ್ವಜನಿಕರಿಗೆ ತಿರಂಗಾ ಧ್ವಜಗಳನ್ನು ವಿತರಿಸುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

ಸ್ವಾತಂತ್ರ್ಯ ದಿನಾಚರಣೆ ವೇಳೆ ಪ್ರತಿಯೊಂದು ಮನೆ, ಅಂಗಡಿ, ಕಚೇರಿ ಹಾಗೂ ವಾಹನಗಳಲ್ಲೂ ರಾಷ್ಟ್ರಧ್ವಜ ರಾರಾಜಿಸುವಂತೆ ಮಾಡುವ ಉದ್ದೇಶದಿಂದ ಈ ಅಭಿಯಾನ ರೂಪಿಸಲಾಗಿದೆ. ದೇಶಭಕ್ತಿ ಮತ್ತು ರಾಷ್ಟ್ರಾಭಿಮಾನವನ್ನು ಪ್ರತಿಯೊಬ್ಬರಲ್ಲೂ ಮೂಡಿಸುವ ನಿಟ್ಟಿನಲ್ಲಿ ಹರ್ ಘರ್ ತಿರಂಗಾ ಅಭಿಯಾನ ಮಹತ್ವದ್ದಾಗಿದೆ ಎಂದು ಹೇಳಿದರು.

ಅಭಿಯಾನಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆಯುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ವ್ಯಾಪಕ ಕಾರ್ಯಕ್ರಮ ನಡೆಸಿ ಜನರನ್ನು ಪಾಲ್ಗೊಳ್ಳುವಂತೆ ಮಾಡಲಾಗುವುದು. ಪ್ರತಿಯೊಬ್ಬರೂ ಸ್ವಾತಂತ್ರ್ಯ ದಿನದ ಸಂಭ್ರಮದಲ್ಲಿ ಭಾಗಿಯಾಗಿ ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸಬೇಕು ಎಂದು ಮನವಿ ಮಾಡಿದರು. ಬಿಜೆಪಿ ಮುಖಂಡರಾದ ಆರ್.ಮೋಹನ್, ಬಿ.ಹೆಚ್. ನಾರಾಯಣ್‌ಗೌಡ, ಬಿ.ವೇದಾವತಿ, ಮಹೇಶ್, ಯೋಗೇಶ್, ಲಕ್ಷ್ಮೀಶ್, ನಾಗೇಂದ್ರ ಪ್ರಸಾದ್, ರೋಹಿತ್ ಮೊದಲಾದವರಿದ್ದರು.

# ರೈಲು ನಿಲುಗಡೆಗೆ ಕಾನೂನು ಹೋರಾಟ ಎಚ್ಚರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆಲೂರು ತಾಲೂಕಿನ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಆರಂಭಿಸಲಾಗಿದ್ದ ರೈಲು ನಿಲುಗಡೆಯನ್ನು ಆದಾಯ ಖೋತಾ ಕಾರಣ ನೀಡಿ ರದ್ದುಪಡಿಸಿರುವುದನ್ನು ಮತ್ತೆ ಆರಂಭಿಸಬೇಕು. ಈ ಸಂಬಂಧ ಸ್ಥಳೀಯ ಜನಪ್ರತಿನಿಧಿಗಳು ಸಂಬಂಧಪಟ್ಟವರ ಮೇಲೆ ಒತ್ತಡ ಹೇರಬೇಕು. ಇಲ್ಲವಾದರೆ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸುವ ಮೂಲಕ ಕಾನೂನು ಹೋರಾಟ ನಡೆಸಲಾಗುವುದು ಎಂದು ಆಲೂರು ರಾಧಮ್ಮ ಜನಸ್ಪಂದನ ಸಂಸ್ಥೆ ಅಧ್ಯಕ್ಷ ಬಿ.ಎನ್. ಹೇಮಂತ್ ಕುಮಾರ್ ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಆಲೂರಿನಲ್ಲಿ 2024ರ ಫೆಬ್ರವರಿ 12 ರಂದು ಪ್ರಾಯೋಗಿಕವಾಗಿ ಕಾರವಾರ




ಎಕ್ಸ್‌ಪ್ರೆಸ್ ರೈಲು ನಿಡುಗಡೆ ಮಾಡಲು ಸೂಚಿಸಲಾಗಿತ್ತು.

ಆದರೆ 2024ರ ಡಿಸೆಂಬರ್ 4 ರಿಂದ ಆದಾಯದ ಕೊರತೆ ಕಾರಣ ನೀಡಿ ನಿಲುಗಡೆ ರದ್ದುಪಡಿಸಿದೆ. ಈ ಸಂಬಂಧ ತಾವು ಹಲವು ಪತ್ರ ಬರೆದು, ಸಂಬಂಧಪಟ್ಟವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದರೂ, ಯಾವುದೇ ಪ್ರಯೋಜನ ಆಗಿಲ್ಲ. ಅಲ್ಲಿಂದ ಇಲ್ಲಿಯವರೆಗೆ ಬರೋಬ್ಬರಿ 18 ತಿಂಗಳು ಕಳೆದಿದ್ದರೂ, ಸ್ಥಳೀಯ ಶಾಸಕರಾಗಲೀ, ಸಂಸದರಾಗಲೀ ಚಕಾರ ಎತ್ತದೆ ಮೌನಕ್ಕೆ ಶರಣಾಗಿದ್ದಾರೆ ಎಂದು ತೀವ್ರವಾಗಿ ಖಂಡಿಸಿದರು.

ಇದರಿಂದ ಆಲೂರು ತಾಲೂಕಿನ ರೈಲ್ವೆ ಪ್ರಯಾಣಿಕರು ತೀವ್ರ ನಿರಾಸೆ ಅನುಭವಿಸುವಂತಾಗಿದೆ ಎಂದರು. ವಿಪರ್ಯಾಸ ಎಂದರೆ ತಾವು ಮಾಹಿತಿ ಹಕ್ಕು ಅಡಿ ಪಡೆದಿರುವ ಅಂಕಿ ಅಂಶಗಳ ಪ್ರಕಾರ, ಆಲೂರು ರೈಲು ನಿಲ್ದಾಣಕ್ಕಿಂತ ಚನ್ನರಾಯಪಟ್ಟಣದ ಡಿ.ಸಮುದ್ರವಳ್ಳಿ, ಅರಸೀಕೆರೆ ಬಾಗೇಶಪುರ, ಹೊಳೆನರಸೀಪುರ ತಾಲೂಕಿನ ಮಾವಿನಕೆರೆ ರೈಲ್ವೆ ನಿಲ್ದಾಣಗಳಿಂದ ಕಡಿಮೆ ಆದಾಯ ಬರುತ್ತಿದ್ದರೂ, ಅಲ್ಲಿ ಒಂದಲ್ಲ, ಹಲವು ರೈಲುಗಳನ್ನು ನಿಲುಗಡೆ ಮಾಡಲಾಗುತ್ತಿದೆ. ಆದರೆ ಆಲೂರಿನಲ್ಲಿ ಆದಾಯ ಬರುತ್ತಿಲ್ಲ ಎಂದು ಒಂದೇ ಒಂದು ರೈಲು ನಿಂತು ಹೊರಡಲು ಅವಕಾಶ ಇಲ್ಲ, ಈ ತಾರತಮ್ಯ ಏಕೆ ಎಂದು ಪ್ರಶ್ನಿಸಿದರು.

ಈ ಸಂಬಂಧ ಸ್ಥಳೀಯ ಶಾಸಕ ಸಿಮೆಂಟ್ ಮಂಜು ಅವರು ಯಾರೊಬ್ಬರಿಗೂ ಒಂದು ಪತ್ರ ಬರೆದಿಲ್ಲ, ಒಂದು ವೇಳೆ ಆ ಪ್ರಯತ್ನ ಮಾಡಿದ್ದರೆ ನಾನು ಅವರ ಕ್ಷಮೆ ಕೇಳುತ್ತೇನೆ ಎಂದ ಹೇಮಂತ್ ಕುಮಾರ್, ಇತ್ತೀಚೆಗೆ ಕೇಂದ್ರಕ್ಕೆ ಸಂಸದ ಶ್ರೇಯಸ್ ಪಟೇಲ್ ಅವರು ರೈಲ್ವೆ ವಿಚಾರಕ್ಕಾಗಿಯೇ ಹಲವು ಬೇಡಿಕೆ ಸಲ್ಲಿಸಿದ್ದಾರೆ. ಆದರೆ ಅದರಲ್ಲಿ ಆಲೂರು ರೈಲು ನಿಲ್ದಾಣದ ಹೆಸರೇ ಇಲ್ಲ ಎಂದು ಬೇಸರ ಹೊರ ಹಾಕಿದರು.

ನಮ್ಮ ಬೇಡಿಕೆ ಈಡೇರಿಕೆಗೆ 30 ದಿನಗಳ ಗಡುವು ನೀಡಲಾಗುವುದು. ಅಷ್ಟರೊಳಗೆ ಯಾರೊಬ್ಬರೂ ಸ್ಪಂದಿಸದೇ ಇದ್ದರೆ ನ್ಯಾಯಾಲಯದ ಮೊರೆ ಹೋಗುವುದಾಗಿ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ರುದ್ರೇಗೌಡ, ಮುಖಂಡರಾದ ಅನೂಪ್, ಮಧು ಸೋಮಶೇಖರ್ ಇದ್ದರು.

# ಚನ್ನರಾಯಪಟ್ಟಣದಲ್ಲಿ ಹರ್ ಘರ್ ತಿರಂಗಾ ಅಭಿಯಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ : 80 ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಶ್ರವಣಬೆಳಗೊಳ ಮಂಡಲದ ವತಿಯಿಂದ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ರಾಷ್ಟ್ರ ಭಕ್ತರು ಹಾಗೂ ವಿದ್ಯಾರ್ಥಿಗಳಿಂದ ತ್ರಿವರ್ಣ ಯಾತ್ರೆ ಅಭಿಯಾನ ಶುಕ್ರವಾರ ನಡೆಯಿತು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಹಾಗೂ ಶ್ರವಣಬೆಳಗೊಳ ಮಂಡಲದ ಅಧ್ಯಕ್ಷ ಪರಮ ಗಂಗಾಧರ್ ಅವರು ದೀಪ ಬೆಳಗಿಸಿ ಯಾತ್ರೆಗೆ ಚಾಲನೆ ನೀಡಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಮಾತನಾಡಿ, ಸ್ವಾತಂತ್ರ್ಯ ದಿನಾಚರಣೆ ಎಂಬುದು ಕೇವಲ ಒಂದು ದಿನ ಆಚರಣೆ ಮಾಡಿ ಕೈ ಬಿಡುವ ಕಾರ್ಯಕ್ರಮವಲ್ಲ. ಪ್ರತಿದಿನ ಪ್ರತಿಕ್ಷಣ ದೇಶಭಕ್ತಿಯ ಬಗ್ಗೆ ಆರಾಧಿಸಬೇಕು. ದೇಶದ ಹಿರಿಮೆಯನ್ನು ಎತ್ತಿ ಹಿಡಿಯುವಲ್ಲಿ ಎಲ್ಲರೂ ಒಗ್ಗೂಡಿ ನಡೆಯಬೇಕು




ಎಂದು ಹೇಳಿದರು.

ತಾಲ್ಲೂಕು ಯುವಮೋರ್ಚಾ ಅಧ್ಯಕ್ಷ ಶ್ರೀಹರಿ ಜೆ. ಗೌಡ ಮಾತನಾಡಿ, ಹಲವಾರು ಮಹನೀಯರ ರಕ್ತ ಬಲಿದಾನದ ಸಂಕೇತವಾಗಿ ಸಿಕ್ಕಿರುವ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬದುಕಿನುದ್ದಕ್ಕೂ ಆಚರಿಸುವ ಮೂಲಕ ಸಂಭ್ರಮಿಸಬೇಕು ಎಂದರು.

ನಮಗೆ ಸ್ವಾತಂತ್ರ್ಯ ಎಂಬುದು ಸುಮ್ಮನೆ ಸಿಕ್ಕಿರುವ ವಸ್ತುವಲ್ಲ. ನಮ್ಮ ಸಾವಿರಾರು ಮಂದಿ ಪೂರ್ವಿಕರು ಸ್ವಾತಂತ್ರ್ಯಕ್ಕಾಗಿ ಜೀವ ಹಾಗೂ ಜೀವನವನ್ನೇ ಮುಡುಪಾಗಿಟ್ಟು ಗಳಿಸಿ ಕೊಟ್ಟಿರುವ ಸಂಭ್ರಮದ ದಿನ. ನಾವು ಮುಂದಿನ ಪೀಳಿಗೆಗೂ ಉಳಿಸಿ ನೀಡಬೇಕು ಎಂದು ತಿಳಿಸಿದರು.

ಅಭಿಯಾನದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು, ತಾಲ್ಲೂಕು ಪ್ರಧಾನ ಕಾರ್ಯದರ್ಶಿಗಳಾದ ಪ್ರಶಾಂತ್ ಮುಳ್ಳುಕೆರೆ, ವಿಶ್ವನಾಥ್ ಗನ್ನಿ, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಬಸವರಾಜ್, ಮಹಿಳಾ ಮೋರ್ಚಾ ಅಧ್ಯಕ್ಷೆ ಅರ್ಪಿತ ಪಟೇಲ್, ಪ್ರಧಾನ ಕಾರ್ಯದರ್ಶಿ ಕಲಾವತಿ, ಪ್ರಮುಖರಾದ ಅಶೋಕ್, ಸತೀಶ್ ಗೌಡಗೆರೆ, ಗುರುರಾಜ್, ವಿಶ್ವನಾಥ್ ಸಾತೇನಹಳ್ಳಿ, ಸತೀಶ್ ಕಂಠಿ, ಪ್ರಸನ್ನ ವಡ್ಡರಹಳ್ಳಿ, ರಾಜಕುಮಾರ್, ಚಂದ್ರಶೇಖರ, ದೇವರಾಜ್ ದಡಿಘಟ್ಟ ಬಸವರಾಜ್, ಶ್ರುತಿ, ಶೋಭಾ, ನಾಗರತ್ನಮ್ಮ ಮತ್ತು ಇತರ ಮಹಿಳಾ ಮುಖಂಡರು ಅಭಿಯಾನದಲ್ಲಿ ಘೋಷಣೆಗಳನ್ನು ಕೂಗುತ್ತಾ ಸಾಗಿದರು.

ಪಟ್ಟಣದ 40 ಅಡಿ ಆಂಜನೇಯ ಸ್ವಾಮಿ ಸನ್ನಿಧಿ ಬಳಿಯಿಂದ ಅಭಿಯಾನವು ಪ್ರಾರಂಭಗೊಂಡು ಕೆ.ಆರ್.ವೃತ್ತ, ನಮೋದಯ ವೃತ್ತ, ಹೊಸ ಬಸ್ ನಿಲ್ದಾಣ ಮಾರ್ಗವಾಗಿ ನಮೋದಯ ವೃತ್ತದ ಮೂಲಕ ಮೈಸೂರು ರಸ್ತೆ, ಆಸ್ಪತ್ರೆ ರಸ್ತೆಯ ಮೂಲಕ ಆಂಜನೇಯ ಸನ್ನಿಧಿಯಲ್ಲಿ ಮುಕ್ತಾಯಗೊಂಡಿತು. ಸಾವಿರಾರು ದೇಶಭಕ್ತರು ಕೈಯಲ್ಲಿ ರಾಷ್ಟ್ರಧ್ವಜ ಹಿಡಿದು "ಭಾರತ್ ಮಾತಾ ಕೀ ಜೈ" ಘೋಷಣೆಗಳೊಂದಿಗೆ ಯಾತ್ರೆಯಲ್ಲಿ ಪಾಲ್ಗೊಂಡರು. ಒಂದು ಸಾವಿರ ಮೀಟರ್ ತಿರಂಗ ಧ್ವಜವು ನೋಡುಗರ ಗಮನ ಸೆಳೆಯಿತು.

ಜಿಲ್ಲಾ ಪದಾಧಿಕಾರಿಗಳು, ಎಲ್ಲಾ ತಾಲೂಕು ಮೋರ್ಚಾ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಎಲ್ಲಾ ಶಕ್ತಿ ಕೇಂದ್ರ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಮಾಜಿ ಅಧ್ಯಕ್ಷರು, ಹಿರಿಯರು ಮತ್ತು ಪದಾಧಿಕಾರಿಗಳು ಹಾಗೂ ಇತರರು ಭಾಗವಹಿಸಿದ್ದರು.

# ರಾಷ್ಟ್ರೀಯ ಹೆದ್ದಾರಿ-75: ಒಂಟಿಮನೆ ದರೋಡೆ ಪ್ರಕರಣ ಭೇದಿಸಿದ ಆಲೂರು ಪೊಲೀಸರು

## ಅಂತರರಾಜ್ಯ ದರೋಡೆಕೋರರು ಸೇರಿ 8 ಮಂದಿ ಅಂದರ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಷ್ಟ್ರೀಯ ಹೆದ್ದಾರಿ-75ರ ಆಲೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಎರಡು ಪ್ರತ್ಯೇಕ ಒಂಟಿಮನೆ ದರೋಡೆ ಪ್ರಕರಣಗಳನ್ನು ಭೇದಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ದಕ್ಷಿಣ ಕನ್ನಡ, ಹಾವೇರಿ ಹಾಗೂ ಹಾಸನ ಜಿಲ್ಲೆಯ ಎಂಟು ಮಂದಿ ಆರೋಪಿಗಳನ್ನು ಬಂಧಿಸಲಾಗಿದ್ದು, ಅವರಿಂದ ಸುಮಾರು 16.6 ಲಕ್ಷ ರೂ. ಮೌಲ್ಯದ ಚಿನ್ನಾಭರಣ, ಬೆಳ್ಳಿ, ಕೃತ್ಯಕ್ಕೆ ಬಳಸಿದ್ದ ಆಯುಧಗಳು ಹಾಗೂ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿಮಾಹಿತಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರು ಕಾರ್ಯಾಚರಣೆಯ ಸಂಪೂರ್ಣ ವಿವರ ನೀಡಿದರು.

### ಬಂಧಿತ ಆರೋಪಿಗಳ ವಿವರ

ದಕ್ಷಿಣ ಕನ್ನಡ ಜಿಲ್ಲೆಯ ಅಶ್ರಫ್ ಎಸ್.ಐ., ಇಬ್ರಾಹಿಂ ಖಲೀಲ್, ಹಮೀದ್ ಅಲಿಯಾಸ್ ಕುಂಜ ಮೂನು, ಸಂಕೇತ್, ರಘು ಅಲಿಯಾಸ್ ರಾಘು, ಹಾವೇರಿ ಜಿಲ್ಲೆಯ ಈರಣ್ಣ ಹಾಗೂ ಸ್ಥಳೀಯರಾದ ಆಲೂರು ತಾಲೂಕಿನ ಸುಲೇಮಾನ್ ಮತ್ತು ಭರತ್ ಬಂಧಿತ ಪ್ರಮುಖ ಆರೋಪಿಗಳಾಗಿದ್ದಾರೆ.

### ಕೃತ್ಯದ ಹಿನ್ನೆಲೆ ಮತ್ತು ತನಿಖೆಯ ಹಾದಿ, ಮಧ್ಯರಾತ್ರಿ ಮುಸುಕುಧಾರಿಗಳ ಅಟ್ಟಹಾಸ

ಜೂನ್ 2ರಂದು ಮಧ್ಯರಾತ್ರಿ 12.45ರ ಸುಮಾರಿಗೆ ಮಣಿಪುರ ಗ್ರಾಮದ ಚಂದ್ರಶೇಖರ್ ಅವರ ಮನೆಗೆ ಹಿಂಬಾಗಿಲು ಮುರಿದು ನುಗ್ಗಿದ್ದ ಆರೋಪಿಗಳು, ಮನೆಯಲ್ಲಿದ್ದ ಚಂದ್ರಶೇಖರ್, ಅವರ ಪತ್ನಿ ಹಾಗೂ ಮೊಮ್ಮಕ್ಕಳನ್ನು ಬೆದರಿಸಿ, ಕೂಗಾಡಿದರೆ ಕೊಲೆ ಮಾಡುವುದಾಗಿ ಎಚ್ಚರಿಸಿದ್ದರು. ಬೀರುವಿನಲ್ಲಿದ್ದ ಚಿನ್ನಾಭರಣ ದೋಚಿ ಪರಾರಿಯಾಗಿದ್ದರು. ಇದೇ ಮಾದರಿಯಲ್ಲಿ ಜುಲೈ 22ರಂದು ಹೊನ್ನವಳ್ಳಿ ಗ್ರಾಮದ ಮಂಜೇಗೌಡ ಅವರ ಮನೆಗೆ ನುಗ್ಗಿದ್ದ ಮುಸುಕುಧಾರಿಗಳು, ಕುಟುಂಬದ ಸದಸ್ಯರಿಗೆ ಚಾಕು ತೋರಿಸಿ, ಕೈಕಾಲು ಕಟ್ಟಿ ದರೋಡೆ ಮಾಡಿದ್ದರು. ಎರಡೂ ಪ್ರಕರಣಗಳ ಕೃತ್ಯದ ಶೈಲಿ ಒಂದೇ ಆಗಿದ್ದರಿಂದ ಎಚ್ಚೆತ್ತ ಪೊಲೀಸರು ವಿಶೇಷ ತನಿಖಾ ತಂಡವನ್ನು ರಚಿಸಿದ್ದರು.



**16.6 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ವಾಹನ ವಶ**



### ಒಳಸಂಚು ರೂಪಿಸಿದ್ದು ಸ್ಥಳೀಯರೇ!

ಮಣಿಪುರ ಗ್ರಾಮದ ಚಂದ್ರಶೇಖರ್ ಅವರ ಮನೆ ನಿರ್ಮಾಣದ ಗುತ್ತಿಗೆ ಕೆಲಸ ಮಾಡಿದ್ದ ಆಲೂರು ತಾಲೂಕಿನ ಈಶ್ವರಹಳ್ಳಿ ಕೂಡಿಗೆ ಗ್ರಾಮದ ಸುಲೇಮಾನ್‌ಗೆ ಮನೆಯ ವಿನ್ಯಾಸದ ಸಂಪೂರ್ಣ ಮಾಹಿತಿ ಇತ್ತು. ಈತ ಕಿತ್ತಗೆರೆ ಗ್ರಾಮದ ಭರತ್‌ನೊಂದಿಗೆ ಸೇರಿ, ಮಂಗಳೂರಿನಲ್ಲಿ ಪರಿಚಯವಾಗಿದ್ದ ಇಬ್ರಾಹಿಂ ಖಲೀಲ್ ಮೂಲಕ ದರೋಡೆಗೆ ಸಂಚು ರೂಪಿಸಿದ್ದ.

ಹೆದ್ದಾರಿ ಬದಿಯ ಒಂಟಿಮನೆಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದ ಈ ಇಬ್ಬರು, ಮನೆಯಲ್ಲಿರುವವರ ಸಂಖ್ಯೆ ಹಾಗೂ ಪ್ರವೇಶಿಸುವ ದಾರಿಗಳ ಕುರಿತು ಮಂಗಳೂರಿನ ಆರೋಪಿಗಳಿಗೆ ಮಾಹಿತಿ ರವಾನಿಸುತ್ತಿದ್ದರು. ಕೃತ್ಯಕ್ಕೂ ಮುನ್ನ ಹಾಸನಕ್ಕೆ ಬಂದು ಸ್ಥಳ ಪರಿಶೀಲನೆ ನಡೆಸಿ ದರೋಡೆ ಮಾಡುವುದು ಇವರ ತಂತ್ರವಾಗಿತ್ತು.

### 'ಗುಡ್ ಮಾರ್ನಿಂಗ್ ಬೀಟ್' ತಂದುಕೊಟ್ಟ ಸುಳಿವು

ಸಿಸಿ ಕ್ಯಾಮೆರಾ ದೃಶ್ಯಾವಳಿಗಳ ಆಧಾರದ ಮೇಲೆ ತನಿಖೆ ಚುರುಕುಗೊಳಿಸಿದ್ದ ಪೊಲೀಸರಿಗೆ, ಆಗಸ್ಟ್ 11ರಂದು ಬೆಳಿಗ್ಗೆ 9.30ರ ವೇಳೆಗೆ ಆಲೂರು ಪಟ್ಟಣದ ನಯರ ಪೆಟ್ರೋಲ್ ಬಂಕ್ ಬಳಿ 'ಗುಡ್ ಮಾರ್ನಿಂಗ್ ಬೀಟ್'ನಲ್ಲಿದ್ದ ಪಿಎಸ್ಐ ಪ್ರವೀಣ್ ಕುಮಾರ್ ಅವರಿಗೆ ಮಾರುತಿ ವ್ಯಾನ್‌ನಲ್ಲಿ ಕುಳಿತಿದ್ದವರ ಮೇಲೆ ಅನುಮಾನ ಮೂಡಿತ್ತು. ವಿಚಾರಣೆ ನಡೆಸಿದಾಗ ಸುಲೇಮಾನ್, ಭರತ್ ಸೇರಿದಂತೆ ಆರು ಮಂದಿ ಸಿಕ್ಕಿಬಿದ್ದಿದ್ದು, ವಿಚಾರಣೆ ತೀವ್ರಗೊಳಿಸಿದಾಗ ಇಡೀ ಜಾಲವೇ ಬಯಲಾಗಿದೆ.

### ಪ್ರಕರಣದ ಪ್ರಮುಖ ಅಂಶಗಳು 19 ಲಕ್ಷ ಮೌಲ್ಯದ ವಸ್ತುಗಳು ವಶ

120 ಗ್ರಾಂ ಚಿನ್ನಾಭರಣ ಹಾಗೂ 32 ಗ್ರಾಂ ಬೆಳ್ಳಿ ಸೇರಿದಂತೆ 16.50 ಲಕ್ಷ ಮೌಲ್ಯದ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ. ದರೋಡೆಗೆ ಬಳಸಿದ್ದ ಆಯುಧ ಹಾಗೂ ಮಾರುತಿ ವ್ಯಾನ್ ಸೇರಿ ಒಟ್ಟು 19 ಲಕ್ಷ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.

### ಬಂಧಿತ ಹಮೀದ್ ವಿರುದ್ಧ 25 ಪ್ರಕರಣ

ಪ್ರಮುಖ ಆರೋಪಿ ಹಮೀದ್ ಅಂತರರಾಜ್ಯ ದರೋಡೆಕೋರನಾಗಿದ್ದು, ಈತನ ವಿರುದ್ಧ ಕರ್ನಾಟಕದ ಬೇಲೂರು, ಬೆಳ್ತಂಗಡಿ, ಮಂಗಳೂರು, ಬಂಟ್ವಾಳ, ಕಡಬ, ಮೂಡಬಿದ್ರೆ ಹಾಗೂ ಕೇರಳದ ಮೂರು ಠಾಣೆಗಳು ಸೇರಿ ಒಟ್ಟು 25 ಪ್ರಕರಣಗಳಿವೆ.

ಜೈಲಿನಲ್ಲಿ ಬೆಳೆದ ಸ್ನೇಹ: ಹಾವೇರಿಯ ಈರಣ್ಣನ ವಿರುದ್ಧವೂ 4 ಪ್ರಕರಣಗಳಿದ್ದು, ಜೈಲಿನಲ್ಲಿದ್ದಾಗ ಹಮೀದ್ ಹಾಗೂ ಈರಣ್ಣನಿಗೆ ಪರಿಚಯವಾಗಿತ್ತು. ಆರು ತಿಂಗಳ ಹಿಂದೆಯಷ್ಟೇ ಇಬ್ಬರೂ ಬಿಡುಗಡೆಯಾಗಿದ್ದರು.

### ವಿಶೇಷ ತಂಡಕ್ಕೆ ಎಸ್ಪಿ ಶ್ಲಾಘನೆ

ಈ ಸವಾಲಿನ ಪ್ರಕರಣವನ್ನು ಭೇದಿಸಿದ ಸಕಲೇಶಪುರ ಡಿವೈಎಸ್ಪಿ ಮಾಲ್ತೇಶ್ ಎಸ್.ಕೆ., ಆಲೂರು ವೃತ್ತ ನಿರೀಕ್ಷಕ ಮೋಹನ್ ರೆಡ್ಡಿ, ಸಕಲೇಶಪುರ ಗ್ರಾಮಾಂತರ ವೃತ್ತ ನಿರೀಕ್ಷಕ ಬಸವನಗೌಡ ಪಾಟೀಲ್, ಆಲೂರು ಪಿಎಸ್ಐ ಪ್ರವೀಣ್ ಕುಮಾರ್, ಸಕಲೇಶಪುರ ಪಿಎಸ್ಐ ಪ್ರಸನ್ನ ಕುಮಾರ್ ಹಾಗೂ ಸಿಬ್ಬಂದಿಯ ಕಾರ್ಯವನ್ನು ಎಸ್ಪಿ ಶುಭನ್ವಿತಾ ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ ಉಪಸ್ಥಿತರಿದ್ದರು.

## ಆ.16 ರಂದು ಅಭಿನಂದನೆ-ಪ್ರಶಸ್ತಿ ಪ್ರದಾನ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಬೆಂಗಳೂರು, ಹಾಸನ ಜಿಲ್ಲಾ ಘಟಕದಿಂದ ಆ.16 ರಂದು ಅಭಿನಂದನಾ ಸಮಾರಂಭ ಹಾಗೂ ನಿವೃತ್ತ ನೌಕರರಿಗೆ ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಎಂ.ಎಸ್.ಕೃಷ್ಣಮೂರ್ತಿ ತಿಳಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದರ ಜೊತೆಗೆ ಜಿಲ್ಲಾ ಶಿಕ್ಷಕ ರತ್ನ ಪ್ರಶಸ್ತಿಯನ್ನೂ ಪ್ರದಾನ ಮಾಡಲಾಗುವುದು ಎಂದರು.

ಶಿಕ್ಷಕರು ಇನ್ನೂ ಹೆಚ್ಚಿನ ಕಲಿಕೆಯ ಕಡೆಗೆ ಗಮನ ಹರಿಸುವಂತೆ ಉತ್ತೇಜನ ನೀಡುವುದು ಇದರ ಉದ್ದೇಶ ಎಂದರು.

ಹಾಗೆಯೇ ಪ್ರಾಥಮಿಕ ಶಾಲಾ ಶಿಕ್ಷಕರ ವಿವಿಧ ಸಮಸ್ಯೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಶೀಘ್ರವಾಗಿ ಪರಿಹರಿಸಬೇಕು ಎಂದು ಒತ್ತಾಯಿಸಿದ ಅವರು, ಜಿಲ್ಲೆಯಲ್ಲಿ ಜೂನ್ ಹಾಗೂ ಜುಲೈ ತಿಂಗಳಲ್ಲಿ ನಿವೃತ್ತರಾದ ಶಿಕ್ಷಕರಿಗೆ ಅಭಿನಂದನೆ ಹಾಗೂ ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದರು.

ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಜಿಲ್ಲಾ ಶಿಕ್ಷಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಾ ಕ್ರೀಡೆ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿರುವ ಶಿಕ್ಷಕರನ್ನೂ ಅಭಿನಂದಿಸಲಾಗುವುದು. ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢಶಾಲೆಗೆ ಬಡ್ತಿ ನೀಡುವ ವಿಚಾರವಾಗಿ ರಾಜ್ಯ ಸಂಘದ ಪದಾಧಿಕಾರಿಗಳೊಂದಿಗೆ ಸಂವಾದ ನಡೆಸಲಾಗುವುದು ಎಂದರು.

ಇದೇ ವೇಳೆ ಶಿಕ್ಷಕರಿಗೆ ಆನ್‌ಲೈನ್ ಕಾರ್ಯ ಒತ್ತಡದಿಂದ ಮುಕ್ತಿ ನೀಡಬೇಕು. ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಗಣತಿ ಮಾಡಿದ ಶಿಕ್ಷಕರಿಗೆ ಗಳಿಗೆ ರಜೆ ಮಂಜೂರು ಮಾಡಿಸಬೇಕು. ಬಿಎಲ್‌ಒ ಕಾರ್ಯ ಒತ್ತಡದಿಂದ ಮುಕ್ತಿಗೊಳಿಸಬೇಕು. ಶಾಲೆಗಳಲ್ಲಿ ಬಿಸಿಯೂಟ ನೀಡುತ್ತಿರುವ ಪೌಷ್ಟಿಕಾಂಶದ ಮೊಟ್ಟೆಯ ದರ ಹೆಚ್ಚಿಸಬೇಕು. ಜೊತೆಗೆ ಪ್ರಾಥಮಿಕ ಶಾಲಾ ಶಿಕ್ಷಕರು ಪದವಿ ಪಡೆದರೆ ಒಂದು ವೇತನ ಬಡ್ತಿ ಮಂಜೂರು ಮಾಡಬೇಕೆಂದರು.

ಸುದ್ದಿಗೋಷ್ಠಿಯಲ್ಲಿ ಗೌರವ ಅಧ್ಯಕ್ಷ ಅಣ್ಣಪ್ಪ, ಪ್ರಧಾನ ಕಾರ್ಯದರ್ಶಿ ದ್ಯಾವೇಗೌಡ, ಮೋಹನ್ ಕುಮಾರ್, ರವೀಂದ್ರ ಮೊದಲಾದವರಿದ್ದರು.

## ಗುರುಕುಲ ಕ್ರಿಕೆಟ್ ಅಕಾಡೆಮಿ ಆ.16 ರಂದು ಲೋಕಾರ್ಪಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಗ್ರಾಮೀಣ ಹಾಗೂ ದೂರದ ಪ್ರದೇಶಗಳಲ್ಲಿರುವ ಕ್ರಿಕೆಟ್ ಪ್ರತಿಭೆಗಳಿಗೆ ಗುಣಮಟ್ಟದ ಹಾಗೂ ವೈಜ್ಞಾನಿಕ ತರಬೇತಿ ಒದಗಿಸುವ ಉದ್ದೇಶದಿಂದ ಟೈಮ್ಸ್ ಗುರುಕುಲ ಶಾಲಾ ಆವರಣದಲ್ಲಿ ಗುರುಕುಲ ಕ್ರಿಕೆಟ್ ಅಕಾಡೆಮಿ ಆರಂಭಿಸಲಾಗುತ್ತಿದೆ ಎಂದು ಪ್ರಾಂಶುಪಾಲೆ ಶೈಲಾ ರೈ ತಿಳಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆ.16ರಂದು ನೂತನ ಅಕಾಡೆಮಿ ಉದ್ಘಾಟನೆಗೊಳ್ಳಲಿದೆ ಎಂದು ತಿಳಿಸಿದರು.




ಟೈಮ್ಸ್ ಗುರುಕುಲ ಶಾಲೆಯ ಸಂಸ್ಥಾಪಕ ಎ.ಬಿ ಸುರೇಂದ್ರ ಕುಮಾರ್ ಅವರ ಮುಂದಾಳತ್ವದಲ್ಲಿ ಅಕಾಡೆಮಿ ರೂಪುಗೊಂಡಿದ್ದು, 8 ರಿಂದ 18 ವರ್ಷದೊಳಗಿನ ಬಾಲಕ-ಬಾಲಕಿಯರಿಗೆ ಲೆದರ್ ಬಾಲ್ ಕ್ರಿಕೆಟ್ ತರಬೇತಿ ನೀಡಲಾಗುತ್ತದೆ ಎಂದು ತಿಳಿಸಿದರು.

ಅನುಭವಿ ತರಬೇತುದಾರರಾದ ಚೈತನ್ಯ ಅವರು ತರಬೇತಿಯ ನೇತೃತ್ವ ವಹಿಸಲಿದ್ದು, ಅವರು ಸುಮಾರು 10 ವರ್ಷಗಳ ಕ್ರಿಕೆಟ್ ಅನುಭವ ಹೊಂದಿದ್ದಾರೆ. ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ಅಡಿಯಲ್ಲಿ ಪಂದ್ಯಗಳ ಅಧಿಕೃತ ನಿರ್ವಹಣೆಯಲ್ಲಿ ಅನುಭವ ಹೊಂದಿರುವ ಅವರು ವಿವಿಧ ವಯೋಮಾನದ ಜಿಲ್ಲಾ ತಂಡಗಳಿಗೆ ಕೋಚ್ ಆಗಿಯೂ ಹಾಲಿ ಕಾರ್ಯನಿರ್ವಹಿಸಿದ್ದಾರೆ ಎಂದರು.

ಇಂದು ಎಲ್ಲ ಕಡೆಯಲ್ಲೂ ಕ್ರಿಕೆಟ್ ಹೆಚ್ಚು ಜನಪ್ರಿಯತೆ ಪಡೆದಿರುವ ಆಟವಾಗಿದ್ದು, ಯುವ ಪೀಳಿಗೆಯೂ ಸಹ ಹೆಚ್ಚು ಒಲವನ್ನು ಈ ಕ್ರೀಡೆಯ ಬಗ್ಗೆ ಹೊಂದಿದ್ದಾರೆ. ಅಂತಹ ಮಕ್ಕಳನ್ನು ಉತ್ತಮ ರೀತಿಯಲ್ಲಿ ತರಬೇತಿಗೊಳಿಸುವುದು ಅಕಾಡೆಮಿಯ ಮೂಲ ಉದ್ದೇಶ ಎಂದು ತಿಳಿಸಿದರು.

## ಸ್ವಾತಂತ್ರ್ಯೋತ್ಸವ ಸನ್ಮಾನಕ್ಕೆ ಇಬ್ಬರು ಪತ್ರಕರ್ತರು ಆಯ್ಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಈ ಬಾರಿಯ ಜಿಲ್ಲಾಡಳಿತದ ಸ್ವಾತಂತ್ರ್ಯೋತ್ಸವ ಸನ್ಮಾನಕ್ಕೆ ಇಬ್ಬರು ಭಾಜನರಾಗಿದ್ದಾರೆ.

ಕಳೆದ ಒಂದೂವರೆ ದಶಕಕ್ಕಿಂತಲೂ ಹೆಚ್ಚು ಕಾಲದಿಂದ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರತಾಪ್ ಜಿ.ಹಿರೀಸಾವೆ ಹಾಗೂ ಪ್ರಜೋದಯ ದಿನಪತ್ರಿಕೆಯಲ್ಲಿ ಕಳೆದ 22 ವರ್ಷದಿಂದ ಉಪ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿರುವ ಭಾರತಿ ಕೆ. ಅವರು ಸನ್ಮಾನಕ್ಕೆ ಆಯ್ಕೆ ಯಾಗಿದ್ದಾರೆ.



ಆ.15ರಂದು ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ನಡೆಯುವ 80ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಸಚಿವರು ಹಾಗೂ ಜಿಲ್ಲಾಡಳಿತದ ಅಧಿಕಾರಿಗಳು ಅಭಿನಂದಿಸಿ ಗೌರವಿಸಲಿದ್ದಾರೆ.

ಜಿಲ್ಲಾಡಳಿತದ ಸನ್ಮಾನಕ್ಕೆ ಭಾಜನರಾಗಿರುವ ಇಬ್ಬರಿಗೂ ಕೆಯೂಡಬ್ಲ್ಯೂಜೆ ರಾಜ್ಯ ಉಪಾಧ್ಯಕ್ಷರಾದ ಹೆಚ್.ಬಿ.ಮದನಗೌಡ, ಜಿಲ್ಲಾಧ್ಯಕ್ಷರಾದ ಜೆ.ಆರ್.ಕೆಂಚೇಗೌಡ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಪಿ.ಎಸ್.ಪ್ರಮೋದ್, ಉಪಾಧ್ಯಕ್ಷರಾದ ಎನ್.ನಂಜುಂಡೇಗೌಡ, ಜಿ.ಪ್ರಕಾಶ್, ರಾಷ್ಟ್ರೀಯ ಮಂಡಳಿ ಸದಸ್ಯರಾದ ರವಿನಾಕಲಗೂಡು, ಶ್ರೀನಿಧಿ ಟಿ.ಎ. ಹಾಗೂ ಸಂಘದ ಎಲ್ಲ ಪದಾಧಿಕಾರಿಗಳು, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು ಸರ್ವ ಸದಸ್ಯರು ಹಾರ್ದಿಕವಾಗಿ ಅಭಿನಂದಿಸಿದ್ದಾರೆ.

## ಇತಿಹಾಸದಲ್ಲಿ ಈ ದಿನ

### ಆಗಸ್ಟ್-15

1947 ಭಾರತವು ಯುನೈಟೆಡ್ ಕಿಂಗ್‌ಡಮ್‌ನಿಂದ ಸ್ವಾತಂತ್ರ್ಯ ಗಳಿಸಿತು ಮತ್ತು 1950 ರವರೆಗೆ ಪ್ರಭುತ್ವವಾಗಿ ಉಳಿಯಿತು.

1461 ಟ್ರೆಬಿಜೋಂಡ್ ಸಾಮ್ರಾಜ್ಯವು ಬೈಜಾಂಟೈನ್ ಸಾಮ್ರಾಜ್ಯದ ಕೊನೆಯ ಅವಶೇಷವಾದ ಸುಲ್ತಾನ್ ಮೆಹ್ಮದ್ ರ ಪಡೆಗಳಿಗೆ ಶರಣಾಯಿತು ; ಚಕ್ರವರ್ತಿ ಡೇವಿಡ್‌ನನ್ನು ಗಡಿಪಾರು ಮಾಡಿ ನಂತರ ಗಲ್ಲಿಗೇರಿಸಲಾಯಿತು.

1620 ಮೇಫ್ಲವರ್ ಇಂಗ್ಲೆಂಡ್‌ನ ಸೌತಾಂಪ್ಟನ್‌ನಿಂದ 102 ಯಾತ್ರಿಕರೊಂದಿಗೆ ಹೊಸ ಪ್ರಪಂಚಕ್ಕೆ ಪ್ರಯಾಣ ಬೆಳೆಸಿತು.

1851: ಮ್ಯಾಸಚೂಸೆಟ್ಸ್‌ನ ವೋರ್ಸೆಸ್ಟರ್‌ನ ಬ್ರಿನ್ಲಿ ಹಾಲ್‌ನಲ್ಲಿ ಎರಡನೇ ಯುಎಸ್ ರಾಷ್ಟ್ರೀಯ ಮಹಿಳಾ ಹಕ್ಕುಗಳ ಸಮಾವೇಶ ನಡೆಯಿತು.

1900 - ಬಾಕ್ಸರ್ ದಂಗೆಯನ್ನು ಹತ್ತಿಕ್ಕುವ ಪ್ರಯತ್ನದಲ್ಲಿ ವಿದೇಶಿ ಪಡೆಗಳು ರಾಜಧಾನಿಯ ಮೂಲಕ ಚಲಿಸುತ್ತಿದ್ದಂತೆ ಚೀನೀ ಸಾಮ್ರಾಜ್ಞಿ ಡೋವೆಜರ್ ಸಿಕ್ಸಿ , ಆಕೆಯ ಕುಟುಂಬ ಮತ್ತು ಆಸ್ಥಾನದ ಸೇವಕರು ಪೀಕಿಂಗ್‌ನಿಂದ ಕ್ಸಿಯಾನ್‌ಗೆ ಪಲಾಯನ ಮಾಡಿದರು.

ಉತ್ತರ ಐರ್ಲೆಂಡ್‌ನ ಒಮಾಗ್‌ನಲ್ಲಿ ಕಾರ್ ಬಾಂಬ್ ಸ್ಫೋಟಗೊಂಡು 29 ಜನರು ಸಾವನ್ನಪ್ಪಿದ ಸ್ವಲ್ಪ ಸಮಯದ ನಂತರ ಸ್ಫೋಟಗೊಂಡ ಪಕ್ಕದಲ್ಲಿ ಒಬ್ಬ ಪುರುಷ ಮತ್ತು ಮಗು (ಇಬ್ಬರೂ ಬದುಕುಳಿದಿದ್ದಾರೆ) ನಿಂತಿದ್ದಾರೆ. ಛಾಯಾಗ್ರಾಹಕ ಬದುಕುಳಿಯಲಿಲ್ಲ. ಒಮಾಘ್ ಬಾಂಬ್ ದಾಳಿ

1998 ರ ಉತ್ತರ ಐರ್ಲೆಂಡ್‌ನಲ್ಲಿ ನಡೆದ ಒಮಾಘ್ ಬಾಂಬ್ ದಾಳಿ , ದಿ ಟ್ರಬಲ್ಸ್‌ನ ಅತ್ಯಂತ ಭೀಕರ ಭಯೋತ್ಪಾದಕ ಘಟನೆ, 29 ಜನರನ್ನು ಕೊಂದು ಸುಮಾರು 220 ಜನರನ್ನು ಗಾಯಗೊಳಿಸಿತು.

2021 ತಾಲಿಬಾನ್ ಪಡೆಗಳು ರಾಜಧಾನಿ ಕಾಬೂಲ್‌ಗೆ ಪ್ರವೇಶಿಸಿ ನಿಯಂತ್ರಣ ಸಾಧಿಸುತ್ತಿದ್ದಂತೆ ಅಫ್ಘಾನ್ ಅಧ್ಯಕ್ಷ ಅಶ್ರಫ್ ಘನಿ ದೇಶವನ್ನು ಬಿಟ್ಟು ಪಲಾಯನ ಮಾಡಿದರು.

## ಅದೊಂದು ಬೇರೆಯದೇ ಅನುಭೂತಿ...5

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-47**

ಮಕ್ಕಳೆಲ್ಲ ಪೀಟೀಮೇಷ್ಟ್ರು ಹೇಳಿದಂತೆಯೇ ಸಾಲಾಗಿ ಬಂದು ಕಿತ್ತಲೆಹಣ್ಣು, ಸೌತೇಕಾಯಿ ಹಾಗೂ ಹುಳಿ ಪೆಪ್ಪರ್‌ಮಿಂಟನ್ನು ತೆಗೆದುಕೊಂಡು ಗೈಡ್ ಚಂದ್ರೇಗೌಡರು ಮುಂದೆ ಮುಂದೆ ನಡೆದಂತೆ ಶಿಸ್ತಿನಿಂದ ಹಿಂಬಾಲಿಸತೊಡಗಿದರು.

ಯಾವುದಾದರೂ ದಿಬ್ಬದ ಎತ್ತರದಲ್ಲಿ ನಿಂತು ದೂರದೂರದವರೆಗೆ ಕಣ್ಣು ಹಾಯಿಸಿದರೆ ಅನಂತರದವರೆಗೂ ಕಾಣುವ ನಿರಂತರವಾಗಿರುವ ಅಗಾಧ ಪರ್ವತ ಶ್ರೇಣಿಗಳು, ಇವೆಲ್ಲದರ ಒಡಲಲ್ಲಿ ನಿರಂತರವಾಗಿ ಚಲನಶೀಲವಾಗಿರುವ ಹಾವುಗಳು, ಬಿಸಿಲು ಕಾಯಿಸುವ ಆಮೆಗಳು, ಕ್ರಿಮಿಗಳು, ಕೀಟಗಳು, ಖಗ-ಮೃಗಗಳು, ನೆಲದೊಗೆಯುತ್ತಿರುವ ಏಡಿಗಳು, ನದಿ ತೊರೆಗಳು, ಮೀನುಗಳು, ಗರಿಕೆಯಿಂದ ಹಿಡಿದು ಹೆಮ್ಮರಗಳವರೆಗಿನ ವೃಕ್ಷ ಸಂಪತ್ತು, ಮೊಳೆಯುತ್ತಿರುವ ಬೀಜಗಳು, ಕೊಳೆಯುತ್ತಿರುವ ದಿಮ್ಮಿಗಳು, ಗಾಳಿ, ನೀರು, ಸೂರ್ಯನ ಶಾಖದಿಂದ ಪುಡಿಪುಡಿಯಾಗುತ್ತಿರುವ ಕಲ್ಲುಗಳು, ದಿಣ್ಣೆಯಾಗುತ್ತಿರುವ ಮರಳು, ನೀರಿನ ಸೆಳೆತಕ್ಕೆ ತಳದ ಮರಳು ಜರುಗುತ್ತಿದ್ದಂತೆ ನಿರಂತರವಾಗಿ ಕದಲುತ್ತಿರುವ ನೀರ್ಗಲ್ಲುಗಳು, ನಿಧಾನವಾಗಿ ಸದ್ದಿಲ್ಲದಂತೆ ಬೀಜಗಳ ಆಸ್ಫೋಟ ನಡೆಸುತ್ತಿರುವ ಅಣಬೆಗಳು, ಶಿಕಾರಿಗಾಗಿ ಬಲೆ ನೇಯುತ್ತಿರುವ ಜೇಡ, ಗಿಡದೆಲೆಯಡಿಯಲಿ ಮೊಟ್ಟೆ ಇಡುತ್ತಿರುವ ಚಿಟ್ಟೆ, ನೆಲವನ್ನು ಉಳುತ್ತಿರುವ ಎರೆಹುಳು, ಒಂದೇ ಎರಡೇ ಅಸಂಖ್ಯಾತ ಕಾರುಬಾರುಗಳ ಆಗರವಾಗಿರುವ ಈ ಪರ್ವತಮಾಲೆ ಈ ಪ್ರಕೃತಿಯಲ್ಲಿ ಮಾನವ ಎಷ್ಟು ನಿಕೃಷ್ಟ ಎಂದು ಸಾಬೀತು ಪಡಿಸುತ್ತದೆ.

ಮಕ್ಕಳೊಂದಿಗೆ ಮಕ್ಕಳಾಗಿ ನಡೆದ ಗಿರೀಶ್, ಒಂದೆಡೆ ದಣಿವಾರಿಸಿಕೊಳ್ಳಲು ಎಲ್ಲರನ್ನೂ ನಿಲ್ಲಲು ಹೇಳಿದರು.



''ಅನಂತವಾಗಿ ಹರಡಿರುವ ಈ ಬ್ರಹ್ಮಾಂಡದಲ್ಲಿ ಬದುಕಲು ಅವಕಾಶವಿರುವುದು ನಮ್ಮ ಈಗಿನ ತಿಳುವಳಿಕೆಯಂತೆ ನಮ್ಮ ಭೂಮಿಯೆಂಬ ಏಕೈಕ ಗ್ರಹದಲ್ಲಿ ಮಾತ್ರ. ಇದು ನಮ್ಮ ಆಸ್ತಿಯಲ್ಲ ಇನ್ನೂ ಸಾವಿರಾರು ವರ್ಷ ಈ ಭೂಮಿಯನ್ನು ಬದುಕಲು ಆಶ್ರಯಿಸಲಿರುವ ಸಮಸ್ತ ಜೀವವೈವಿಧ್ಯದ್ದು. ಪ್ರವಾಸೋದ್ಯಮ, ಜಾನುವಾರುಗಳ ಪೋಷಣೆ, ನಗರೀಕರಣ, ರಸ್ತೆ ನಿರ್ಮಾಣ, ವಸತಿ ಅಗತ್ಯ, ಕೃಷಿಭೂಮಿ ವಿಸ್ತರಣೆ, ಗಣಿಗಾರಿಕೆ, ಮರಕಡಿತ ಇವೇ ಮುಂತಾದ ಅಗತ್ಯ ಅಡಚಣೆಗಳು ಅರಣ್ಯಭೂಮಿ ಕಡಿಮೆಯಾಗಲು, ನಿಸರ್ಗ ಸಂಪತ್ತು ಬಿಕ್ಕಟ್ಟು ಎದುರಿಸಲು, ಜೀವವೈವಿಧ್ಯ ಆತಂಕದ ಸ್ಥಿತಿ ತಲುಪಲು ಮತ್ತು ಮಾನವ-ವನ್ಯಜೀವಿ ಸಂಘರ್ಷವೇರ್ಪಡಲು ಕಾರಣವಾಗಿದೆ.

ಪಶ್ಚಿಮ ಘಟ್ಟದ ಈ ಮಳೆಕಾಡುಗಳು ಜಗತ್ತಿನ ಶ್ವಾಸಕೋಶಗಳಲ್ಲಿ ಒಂದಾಗಿವೆ. ಕಲ್ಪನೆಗೂ ನಿಲುಕದ ಅಗಾಧವಾದ ಜೀವವೈವಿಧ್ಯಕ್ಕೆ ಆಧಾರವಾಗಿದೆ. ಹಾಗೆಯೇ ಅತ್ಯಂತ ಆತಂಕದ ಅಂತಿಮ ದಿನಗಳನ್ನು ಎದುರಿಸುತ್ತಿವೆ ಎಂಬುದೂ ಅಷ್ಟೇ ಸತ್ಯವಾಗಿದೆ. ಸಹ್ಯಾದ್ರಿ ಸಾಲುಗಳೆಂದೇ ಹೆಸರಾಗಿರುವ ಈ ಪಶ್ಚಿಮ ಘಟ್ಟಗಳು ಗುಜರಾತ್‌ನಿಂದ ಪ್ರಾರಂಭವಾಗಿ ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ ಹೀಗೇ ಸಾಗಿ ತಮಿಳುನಾಡಿನಲ್ಲಿ ಕೊನೆಗೊಳ್ಳುತ್ತವೆ. ಈ ಪ್ರದೇಶದಲ್ಲಿ ಹಲವು ಅಭಯಾರಣ್ಯಗಳು, ಮೀಸಲು ಅರಣ್ಯಗಳು, ರಾಷ್ಟ್ರೀಯ ಉದ್ಯಾನಗಳು ಇದ್ದು ವೈವಿಧ್ಯಮಯ ಜೀವ ಸಂಕುಲಗಳಿಗೆ ಆಶ್ರಯ ನೀಡಿವೆ. ಈ ಘಟ್ಟಶ್ರೇಣಿಗಳು ಗೋದಾವರಿ, ಕಾವೇರಿ, ಕೃಷ್ಣಾ, ತುಂಗಾ, ಕಾಳಿ, ಭದ್ರಾ, ಭವಾನಿ, ಭೀಮಾ, ಮಲಪ್ರಭಾ, ಘಟಪ್ರಭಾ, ಹೇಮಾವತಿ, ಕಬಿನಿ, ಪೆರಿಯಾರ್, ಪಂಪಾ, ನೇತ್ರಾವತಿ, ಶರಾವತಿ, ಮಾಂಡೋವಿ, ಜುವಾರಿ ಮುಂತಾದ ಜೀವನದಿಗಳಿಗೆ ಜನ್ಮಸ್ಥಾನವಾಗಿದೆ.

ಎಷ್ಟೇ ದೊಡ್ಡ ನಗರ ನಿರ್ಮಾಣ ಮಾಡಿದರೂ, ಆರು ಲೇನ್‌ನ ರಸ್ತೆ ನಿರ್ಮಿಸಿದರೂ, ಪ್ರತೀ ಹಳ್ಳಿಯಲ್ಲೂ ನಾಲ್ಕಾರು ರೆಸಾರ್ಟ್ ಪ್ರಾರಂಭವಾದರೂ, ಬೆಟ್ಟಗಳನ್ನು ಬಗೆದು ನೆಲಸಮಮಾಡಿ ಅದಿರು ಅಗೆದರೂ, ಸಿಮೆಂಟ್ ತಯಾರಿಸಿದರೂ, ಸಾವಿರಾರು ವಸತಿ ನಿರ್ಮಾಣ ಮಾಡಿದರೂ ಅಂತಿಮವಾಗಿ ನಮಗೆ ನಮ್ಮ ಕಾಡುಗಳು ನೀಡುವ ಪರಿಶುದ್ಧ ಗಾಳಿಯೇ ಬೇಕು, ಹೊಟ್ಟೆಗೆ ಅನ್ನ ತಿನ್ನಲು ಸಮತೋಲಿತ ಆರೋಗ್ಯಕರ ವಾತಾವರಣವಿರಬೇಕು. ಕುಡಿಯಲು, ಬೆಳೆ ಬೆಳೆಯಲು ನಮ್ಮ ಕಾಡುಗಳು ದಯಪಾಲಿಸುವ ಶುಭ್ರ ಜೀವಜಲವೇ ಬೇಕು. ಹಾಗಾಗಿ ಇವನ್ನೆಲ್ಲ ನಾವು ಉಳಿಸಿಕೊಳ್ಳಬೇಕು'' ಎಂದು ತಿಳಿಹೇಳಿದರು.

ಅಷ್ಟರಲ್ಲಿ ಹಿಂದೆ ನಿಧಾನವಾಗಿ ಬರುತ್ತಿದ್ದವರೂ ಸಹಾ ಸೇರಿಕೊಂಡರು. ಹಣ್ಣು ತಿಂದು ನೀರು ಕುಡಿದ ಮಕ್ಕಳು ಮತ್ತೆ ಆ ಶಿಶಿಲಕುಡಿಯತ್ತ ದೃಷ್ಟಿ ನೆಟ್ಟವರೇ ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ, ಜಗ್ಗದೆಯೇ ಕುಗ್ಗದೆಯೇ ನುಗ್ಗಿ ನಡೆ ಮುಂದೆ..... ಎಂದುಕೊಳ್ಳುತ್ತಾ ಹೆಜ್ಜೆಹಾಕತೊಡಗಿದರು. ಬೆಟ್ಟದ ತುದಿಯೇರಿದ ಹುಡುಗರು ಏರುವಾಗ ಅನುಭವಿಸಿದ ಅಗಾಧ ಶ್ರಮವನ್ನು ಮರೆತು ಅಲ್ಲಿ ತೂಯ್ಯುತಿದ್ದ ತಂಗಾಳಿಯನ್ನು ತಮ್ಮ ಶ್ವಾಸ ಪೂರ್ತಿಯಾಗಿ ತುಂಬಿಕೊಳ್ಳುವಂತೆ ಎಳೆದುಕೊಂಡು ಅಷ್ಟೆತ್ತರದಿಂದ ಕಣ್ಣು ಹಾಯುವವರೆಗೆ ನೋಡಿ ಆನಂದಿಸಿದರು. ಯಾರಿಗೂ ಕೆಳಗಿಳಿಯುವ ಮನಸ್ಸೇ ಇಲ್ಲವೆಂಬಂತೆ ಸಂಭ್ರಮಾಚರಣೆಯಲ್ಲಿ ಮೈಮರೆತಿದ್ದರು. ಕಡೆಗೆ ಗಿರೀಶರೇ ಇಲ್ಲಿಂದ ಇಳಿದು ಊಟ ಮುಗಿಸಿಕೊಂಡು ಇಲ್ಲಿಂದ ಇಪ್ಪತ್ತು ಮೈಲು ದೂರದ ದೇವರಮನೆಯಲ್ಲಿ ಇವತ್ತಿನ ಬಿಡಾರ ಹೂಡಬೇಕಿದೆ ಎನ್ನುತ್ತಾ ಒತ್ತಾಯದಿಂದ ಎಲ್ಲರನ್ನೂ ಹೊರಡಿಸಿದರು.

ಒಲ್ಲದ ಮನಸ್ಸಿನಿಂದ ಕೆಳಗಿಳಿದ ಮಕ್ಕಳು ಊಟ ಮುಗಿಸಿ, ಚಂದ್ರೇಗೌಡರಿಗೆ ಧನ್ಯವಾದ ಹೇಳಿ, ಬಸ್ಸನ್ನೇರಿ ಶಿಶಿಲಕುಡಿ ದೃಷ್ಟಿಯಿಂದ ಮರೆಯಾಗುವವರೆಗೂ ಮನದಣಿಯೆ ನೋಡುತ್ತಲೇ ಇದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248